ತುರುವೇಕೆರೆ ನಗರದ ಕೈಗಾರಿಕಾ ಬ್ಯಾಂಕ್ ಸ್ಥಗಿತ ಆಗಿರುವುದು

106(138): ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ತುರುವೇಕೆರೆ ನಗರದಲ್ಲಿ ಕೈಗಾರಿಕಾ ಬ್ಯಾಂಕ್ ಪ್ರಾರಂಭ ಆಗಿ ಎಷ್ಟು ವರ್ಷಗಳಾಗಿವೆ;

ಆ. ಕಳೆದ ಮೂರು ವರ್ಷದಲ್ಲಿ ಈ ಬ್ಯಾಂಕಿನಲ್ಲಿ ಯಾವಾವ ಚಟುವಟಿಕೆ ಮಾಡಲಾಗಿದೆ;

ಇ. ಅರ್ಜಿದಾರರಿಗೆ ಯಾವ ಸವಲತ್ತು ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ, ಈ ಬ್ಯಾಂಕ್‌ಗೆ ಸವಲತ್ತು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ;

ಉ. ಅನೇಕ ಬಾರಿ ಪ್ರಸ್ತಾಪ ಮಾಡಿದರೂ ಇಲಾಖೆಯು ಸಾಕಷ್ಟು ಅನುಕೂಲ ಮಾಡದಿರಲು ಕಾರಣ ಏನು;

ಊ. ಈ ವರ್ಷದಿಂದಲಾದರೂ ನಂಬಿರುವ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲಾಗುವುದೆ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕಾ ಸಚಿವರು)

ಅ. ತುರುವೇಕೆರೆ ನಗರದಲ್ಲಿ ಯಾವುದೇ ಕೈಗಾರಿಕಾ ಬ್ಯಾಂಕ್ ಸ್ಥಾಪನೆಯಾಗಿರುವುದಿಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಉದ್ಭವಿಸುವುದಿಲ್ಲ.

ಉ. ಉದ್ಭವಿಸುವುದಿಲ್ಲ.

ಊ. ಉದ್ಭವಿಸುವುದಿಲ್ಲ.

ಬಾಗಲಕೋಟೆ ಜಿಲ್ಲೆಗೆ ಕೊಳವೆಬಾವಿಗಳ ಕೊರತೆ

107(506): ಶ್ರೀ ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ. ಬಾಗಲಕೋಟೆ ಜಿಲ್ಲೆಯ 6 ತಾಲ್ಲೂಕುಗಳಲ್ಲಿ 5 ತಾಲ್ಲೂಕುಗಳು ವಿಶೇಷವಾಗಿ ಬಾಗಲಕೋಟೆ ಹಾಗೂ ಬೀಳಗಿ ಹೆಚ್ಚಿನ ಪ್ರಮಾಣದಿಂದ ಆಲಮಟ್ಟಿ ಜಲಾಶಯದಿಂದ ಮುಳುಗಡೆಯಲ್ಲಿ ಬಂದಿರುವುದು ಸರ್ಕಾರದ ಗಮನದಲ್ಲಿದೆಯೇ?

ಆ. ಅದೇ ರೀತಿ ಸಣ್ಣ ಹಿಡುವಳಿದಾರ ಹಿಂದುಳಿದ ವರ್ಗದ ಜನರ ಜಮೀನುಗಳು ಹಾಗೂ ಪರಿಶಿಷ್ಟ ಜಾತಿ ಪಂಗಡಗಳ ಜನರ ಜಮೀನುಗಳು ಮುಳುಗಡೆಯಲ್ಲಿ ಬಂದಿರುವುದೂ ಕೂಡ ಸರ್ಕಾರದ ಗಮನದಲ್ಲಿದೆಯೇ?

ಇ. ಅಂಥ ಸಮುದಾಯಗಳ ಕೆಲವೇ ಕೆಲವು ಜಮೀನುಗಳು ಉಳಿದುಕೊಂಡದ್ದು ಉಪ ಜೀವನಕ್ಕೆ ನೀರಾವರಿ ಮಾಡಬಯಸಿದ್ದರೂ ಕೊಳವೆಬಾವಿಗಳ ಕೊರತೆಯಿಂದ ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರ ಗಮನಿಸಿದೆಯೇ?

ಈ. ಹಾಗಿದ್ದಲ್ಲಿ ಅವರಿಗಾಗಿ ಹೆಚ್ಚುವರಿ ವೈಯಕ್ತಿಕ ನೀರಾವರಿ ಕೊಳವೆಬಾವಿಗಳನ್ನು ಹಾಗೂ ಗಂಗಾ ಕಲ್ಯಾಣ ಯೋಜನೆಯಡಿ ಸಮೂಹ ನೀರಾವರಿ ವ್ಯವಸ್ಥೆಗಾಗಿ ಪ್ರಸಕ್ತ ವರ್ಷ ನೀಡಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಹೌದು

ಆ. ಹೌದು

ಇ. 2001-02ನೇ ಸಾಲಿನಲ್ಲಿ ಬಾಗಲಕೋಟೆ ವಿಧಾನ ಸಭಾ ಕ್ಷೇತ್ರದಲ್ಲಿ 31 ಕೊಳವೆಬಾವಿಗಳನ್ನು ಮತ್ತು ಬೀಳಗಿ ವಿಧಾನಸಭಾ ಕ್ಷೇತ್ರದಲ್ಲಿ 20 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

ಈ. 2002-03ನೇ ಸಾಲಿನಲ್ಲಿ ಅಯವ್ಯಯದ ಹಂಚಿಕೆಯಂತೆ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಮುಖಾಂತರ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿಯಲ್ಲಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ - 4 ಬೀಳಗಿ ವಿಧಾನಸಭಾ ಕ್ಷೇತ್ರದಲ್ಲಿ - 3 ಮತ್ತು ಗಂಗಾ ಕಲ್ಯಾಣ ಯೋಜನೆಯಡಿ ಬಾಗಲಕೋಟೆ-2, ಕೊಳವೆಬಾವಿಗಳನ್ನು ಕೊರೆಯಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮುಖಾಂತರ ಬಾಗಲಕೋಟೆ ಮತ್ತು ಬೀಳಗಿ ಕ್ಷೇತ್ರಗಳಲ್ಲಿ ತಲಾ 2 ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಲ್ಲಿ ಕೊಳವೆಬಾವಿಗಳನ್ನು ಕೊರೆಯಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಅಂತರ್ಜಲ ಕುಸಿತ

108(134): ಶ್ರೀ ಶಂಕರಲಿಂಗೇಗೌಡ ಎಸ್. (ಚಾಮರಾಜ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಅಂತರ್ಜಲ ಕಡಿಮೆಯಾಗಿದೆ ವಿವರ ನೀಡುವುದು,

ಆ. ಇದು ತೀವ್ರವಾದ ಕಳವಳಕಾರಿಯಾದ ವಿಷಯವಲ್ಲವೇ,

ಇ. ಹಾಗಿದ್ದಲ್ಲಿ ಸರ್ಕಾರ ಈ ಕುರಿತು ಈಗಾಗಲೇ ಕೈಗೊಂಡಿರುವ ಕ್ರಮಗಳೇನು, ಮುಂಚಿ ಕೈಗೊಳ್ಳಬಹುದಾದ ಕ್ರಮಗಳೇನು?